# ಸಾರ್ವಜನಿಕ ಗ್ರಂಥಾಲಯ ಇಲಾಖೆ

## ನಿರ್ದೇಶಕರ ಮಾತು

ರಾಜ್ಯಾದಂತ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಅಡಿಯಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ– 1; ನಗರ ಕೇಂದ್ರ ಗ್ರಂಥಾಲಯಗಳು – 26; ಜಿಲ್ಲಾ ಕೇಂದ್ರ ಗ್ರಂಥಾಲಯಗಳು – 29; ಕಾರ್ಯ ನಿರ್ವಹಿಸುತ್ತಿದೆ. ಇವುಗಳ ಅಡಿಯಲ್ಲಿ 490 ಶಾಖಾ ಗ್ರಂಥಾಲಯಗಳು, 5766 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು, ಹಾಗೂ 15 ಸಂಚಾರಿ ಗ್ರಂಥಾಲಯಗಳು ಪ್ರಮುಖವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಗ್ರಂಥಾಲಯಗಳನ್ನು ವಿವಿದ ಹುದ್ದೆಗಳಲ್ಲಿ 1151 ಖಾಯಂ ಸಿಬ್ಬಂದಿಗಳು ಹಾಗೂ ಗೌರವ ಸಂಭಾವನೆಯಡಿಯಲ್ಲಿ 5766 ಮೇಲ್ವಿಚಾರಕರು ಗ್ರಂಥಾಲಯಗಳಲ್ಲಿ ಸೇವೆಯನ್ನು ನೀಡುತ್ತಿದ್ದಾರೆ.

ಸಾರ್ವಜನಿಕರಲ್ಲಿ ನಿರಂತರ ಕಲಿಕೆಯು ಇಂದಿನ ಅಗತ್ಯವಾಗಿದ್ದು, ಶಾಲಾ ಕಾಲೇಜುಗಳ ಸಾಂಪ್ರದಾಯಿಕ ಕಲಿಕೆಗೆ ಪೂರಕವಾಗಿ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯನಿರ್ವಹಿಸಬೇಕು. ಈ ಗುರಿಯನ್ನು ತಲುಪಲು ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಜವಾಬ್ದಾರಿ ಗುರುತರವಾಗಿರುತ್ತದೆ. . ಸರ್ಕಾರದ ವಿವಿದ ಯೋಜನೆಗಳಲ್ಲಿ ಪ್ರತಿ ವರ್ಷ ಇಲಾಖೆಯಿಂದ ಸುಮಾರು 15 ಲಕ್ಷ ಪ್ರತಿಗಳ ಗ್ರಂಥಗಳು ರಾಜ್ಯಾದ್ಯಂತ ಸಾರ್ವಜನಿಕ ಗ್ರಂಥಾಲಯಗಳ ಮೂಲಕ ಸರಬರಾಜು ಆಗುತ್ತಿದೆ. ಈ ಗ್ರಂಥಗಳನ್ನು ನೇರವಾಗಿ ಓದುಗನ ಗಮನಕ್ಕೆ ಬರುವಂತೆ ಸೇವೆಯನ್ನು ಆಯಾ ಗ್ರಂಥಪಾಲಕನು ನಿರ್ವಹಿಸಬೇಕು.

ಈಗಾಗಲೇ ಸರ್ಕಾರವು ಇಲಾಖೆಯ ಮುಖಾಂತರ ರಾಜ್ಯಾದ್ಯಂತ ಅನೇಕ ಮಾದರಿ ಗ್ರಂಥಾಲಯಗಳ ಕಟ್ಟಡವನ್ನು ಕಟ್ಟಿಸಲು ವಿವಿಧ ಹಂತಗಳಲ್ಲಿ ಸಂಪನ್ಮೂಲಗಳನ್ನು ವಿನಿಯೋಗಿಸಿದೆ. ಜೊತೆಯಲ್ಲಿ ಆಯಾ ಜಿಲ್ಲಾ / ನಗರ ಗ್ರಂಥಾಲಯಗಳ ಪ್ರಾಧಿಕಾರದ ಮುಖಾಂತರ ಗ್ರಂಥಪಾಲಕರು ಹೊಸಕಟ್ಟಡಗಳು/ ನಿವೇಶನಗಳನ್ನು ಪಡೆಯಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸ್ಥಳೀಯ ಸಂಘಸಂಸ್ಥೆಗಳ ಸಹಾಯ ಹಾಗೂ ಸಂಯೋಜನೆಯನ್ನು ಬಲಪಡಿಸಬೇಕು. ಹಾಲಿ ಇರುವ ಗ್ರಂಥಾಲಯಗಳನ್ನು ಸಮಯಕ್ಕೆ ಸರಿಯಾಗಿ ತೆರೆದು, ಸ್ವಚ್ಚತೆ, ಓದುಗನಿಗೆ ಓದುವ ವಾತಾವರಣವನ್ನು ನಿರ್ಮಿಸುವ ಕಾರ್ಯಕ್ರಮವನ್ನು ಆಯಾ ಗ್ರಂಥಾಲಯಗಳಲ್ಲಿ ಹಾಕಿಕೊಳ್ಳಬೇಕು. ವಿಶೇಷವಾಗಿ ಸಾರ್ವಜನಿಕ ಗ್ರಂಥಾಲಯಗಳು ಸಮಾಜದ ದುರ್ಬಲ ವರ್ಗಗಳ ಮಕ್ಕಳು, ಮಹಿಳೆಯರು, ವಿದ್ಯಾರ್ಥಿಗಳು ಉಪಯೋಗಿಸುವ ಪೂರಕ ಗ್ರಂಥಗಳನ್ನು ಒದಗಿಸುವ ವ್ಯವಸ್ಥೆ ಆಗಬೇಕು.

ಬದಲಾವಣೆ ಆಗುತ್ತಿರುವ ತಂತ್ರಜ್ಞಾನದ ಹಿನ್ನಲೆಯಲ್ಲಿ ಇ–ಆಡಳಿತ ವ್ಯವಸ್ಥೆಯಡಿಯಲ್ಲಿ ಇ–ಗ್ರಂಥಾಲಯಗಳ ಸೇವೆ & ಅಂತರಜಾಲದ ಸೇವೆಯನ್ನು ಈಗಿರುವ ಹಂತದಿಂದ ಬಲಪಡಿಸುವಲ್ಲಿ ಇಲ್ಲ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಜಾರಿಗೆ ತರಬೇಕು. ಇದಕ್ಕೆ ಪೂರಕವಾಗಿ ಕಾರ್ಯಕ್ರಮವನ್ನು ಇಲಾಖೆಯು ಹಾಕಿಕೊಳ್ಳಬೇಕು.

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪ್ರಮುಖ ಆಕರ್ಷಣೆಯಾದ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಪಠ್ಯಪುಸ್ತಕಗಳು, ಸ್ಪರ್ಧಾತ್ಮಕ ಪರೀಕ್ಷಾ ವಿಭಾಗಕ್ಕೆ ಪೂರಕ ಪಠ್ಯ ಹಾಗೂ ಪಠ್ಯೇತರ ಗ್ರಂಥಗಳನ್ನು ಒದಗಿಸಿ ಗ್ರಂಥಾಲಯ ಸೇವೆಯನ್ನು ಜೀವಂತವಾಗಿರಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಲಭ್ಯವಿರುವ ಸಂಪನ್ಮೂಲಗಳ ಸದ್ಬಳಕೆಯನ್ನು ಆಯಾ ಮುಖ್ಯ ಗ್ರಂಥಾಲಯಾಧಿಕಾರಿಗಳು ಹಾಗೂ ಉಪನಿರ್ದೇಶಕರು ಮಾಡುವಂತಾಗಲು ಪಾರದರ್ಶಕವಾದ ನಡೆನುಡಿಯನ್ನು ಪಾಲಿಸಬೇಕು.

1. ಜಾರಿಯಲ್ಲಿರುವ ಏಕ ಗವಾಕ್ಷಿಯೋಜನೆಯನ್ನು ಕಾರ್ಯ ಕ್ಷಮತೆಯನ್ನು ಸಮೀಕ್ಷೆ ಮಾಡಲು ಶಿಕ್ಷಣ ಇಲಾಖೆಯು 2011–12ನೇ ಸಾಲಿಗೆ ಸಮೀಕ್ಷಾ ಕಾರ್ಯಕ್ರಮವನ್ನು ಹಾಕಿಕೊಂಡಿದೆ.
2. ಕರ್ನಾಟಕ ಜ್ಞಾನ ಆಯೋಗದ ಸಹಯೋಗದೊಡನೆ ಈಗಿರುವ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಬದಲಾವಣೆ ಮಾಡಲು ಕಾರ್ಯೋನ್ಮುಕವಾಗಿದೆ.

ಕೊನೆಯದಾಗಿ, ಕರ್ನಾಟಕ ರಾಜ್ಯದ ಎಲ್ಲಾ ಗ್ರಂಥಾಲಯಗಳು ಸಾರ್ವಜನಿಕ ಮಾಹಿತಿ ಕೇಂದ್ರಗಳಾಗಿ ಕಾರ್ಯನಿರ್ವಹಿಸುವಂತಾಗಬೇಕು. ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಇಲಾಖೆಯ ಎಲ್ಲಾ ಹಂತದ ಅಧಿಕಾರಿ / ಸಿಬ್ಬಂದಿಯು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು.

❄❄❄❄❄❄